ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

### ಸಿ.ಡಿ. ಪ್ರಕರಣ: ಕಬ್ಬನ್ ಪಾರ್ಕ್ ಠಾಣೆ ಪೊಲೀಸರಿಂದ ನಾಲ್ಕು ಗಂಟೆ ವಿಚಾರಣೆ ● ಏಪ್ರಿಲ್ 2ಕ್ಕೆ ಪುನಃ ವಿಚಾರಣೆ

# ವಕೀಲರ ಕೇಳಿ ಉತ್ತರ; ಜಾರಿಕೊಂಡ ರಮೇಶ

ಪ್ರಜಾವಾಣಿ ವಾರ್ತೆ 30-3-21

ಬೆಂಗಳೂರು: ಸಿ.ಡಿ.ಯಲ್ಲಿದ್ದಾರೆ ಎನ್ನಲಾದ ಯುವತಿ ನೀಡಿದ್ದ ದೂರು ಆಧರಿಸಿ ದಾಖಲಾಗಿರುವ ಎಫ್‌ಐಆರ್ ತನಿಖೆ ಆರಂಭಿಸಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರನ್ನು ಸೋಮವಾರ ನಾಲ್ಕು ಗಂಟೆ ವಿಚಾರಣೆ ನಡೆಸಿದರು.

'ಕೆಲಸ ಕೊಡಿಸುವುದಾಗಿ ಹೇಳಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿ ಯುವತಿ ನೀಡಿದ್ದ ದೂರು ಆಧರಿಸಿ, ರಮೇಶ ವಿರುದ್ಧ ಪ್ರಕರಣ ದಾಖಲಾಗಿತ್ತು. ವಿಚಾರಣೆಗೆ ಹಾಜರಾಗುವಂತೆ ರಮೇಶಗೆ ಪೊಲೀಸರು ನೋಟಿಸ್ ನೀಡಿದ್ದರು.

ವಿಶೇಷ ವಿಚಾರಣಾ ಕೊಠಡಿಗೆ ಬೆಳಿಗ್ಗೆ 10 ಗಂಟೆಗೆ ಹೋಗಿದ್ದ ರಮೇಶ, ಮಧ್ಯಾಹ್ನ 2 ರವರೆಗೆ ವಿಚಾರಣೆ ಎದುರಿಸಿದರು. ಇನ್‌ಸ್ಪೆಕ್ಟರ್ ಮಾರುತಿ ನೇತೃತ್ವದ ತಂಡ, ಹಲವು ಪ್ರಶ್ನೆಗಳಿಗೆ ಉತ್ತರ ಪಡೆಯಲು ಪ್ರಯತ್ನಿಸಿತು. ಸಮರ್ಪಕ ಉತ್ತರ ನೀಡದ ರಮೇಶ, 'ವಕೀಲರ ಕೇಳಿ ಹೇಳುವೆ. ಕಾಲಾವಕಾಶ ಕೊಡಿ' ಎಂದಷ್ಟೇ ಹೇಳಿ ವಿಚಾರಣೆಯಿಂದ ಜಾರಿಕೊಂಡರು ಎಂದು ಗೊತ್ತಾಗಿದೆ.



ರಮೇಶ ಜಾರಕಿಹೊಳಿ

ಯುವತಿ ಪರಿಚಯವೇ ? ಯಾವಾಗಲಾದರೂ ಭೇಟಿಯಾಗಿದ್ದಿರಾ? ಯುವತಿಗೆ ಕೆಲಸ ಕೊಡಿಸುವ ಭರವಸೆ ನೀಡಿದ್ದು ನಿಜವೇ ? ನಿಮ್ಮ ಮನೆಗೆ ಯುವತಿ ಬಂದಿದ್ದರಾ ? ಯುವತಿಯನ್ನು ನೋಡಿದರೆ ಗುರುತು ಹಿಡಿಯುತ್ತೀರಾ ? ನಿಮ್ಮ ಮೇಲೆ ಹನಿಟ್ರ್ಯಾಪ್ ಆಗಿದೆಯಾ? ಸೇರಿದಂತೆ ಹಲವು ಪ್ರಶ್ನೆಗಳು ಪೊಲೀಸರ ಪಟ್ಟಿಯಲ್ಲಿದ್ದವು.

'ಯುವತಿ ನನಗೆ ಗೊತ್ತೇ ಇಲ್ಲವೆಂದ ಮೇಲೆ ಮುಂದಿನ ಪ್ರಶ್ನೆಗಳಿಗೆ ಹೇಗೆ ಉತ್ತರಿಸುವುದು. ನನ್ನ ವಿರುದ್ಧವೇ ಷಡ್ಯಂತ್ರ ನಡೆಯುತ್ತಿದೆ. ಸಿ.ಡಿ.ಯಲ್ಲಿರುವ ವಿಡಿಯೊ ಸಂಕಲನ ಮಾಡಿದ್ದಾಗಿದೆ. ನನ್ನ ಬಳಿ 11 ದಾಖಲೆಗಳು ಇವೆ. ಅದನ್ನು ಎಸ್‌ಐಟಿಗೆ ಕೊಡುತ್ತೇನೆ' ಎಂದರು.

'ದಾಖಲೆಗಳು ಎಲ್ಲಿ ಸಿಕ್ಕವು' ಎಂದು ಪೊಲೀಸರು ಪ್ರಶ್ನಿಸಿದ್ದಕ್ಕೆ, ರಮೇಶ ತಬ್ಬಿಬ್ಬಾದರು. 'ಅದು ನನ್ನ ವೈಯಕ್ತಿಕ ಮೂಲ. ಆ ಬಗ್ಗೆಯೂ ವಕೀಲರನ್ನು ಕೇಳಿಯೇ ಹೆಚ್ಚಿನ ಮಾಹಿತಿ ನೀಡುವೆ' ಎಂದು ಹೇಳಿ ನುಣಚಿಕೊಂಡರೆಂದೂ ಮೂಲಗಳು ಹೇಳಿವೆ.

'ನಿಮ್ಮ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುವೆ. ಆದರೆ, ಏಪ್ರಿಲ್ 2ರವರೆಗೆ ಕಾಲಾವಕಾಶ ನೀಡಿ' ಎಂದೂ ರಮೇಶ ಕೋರಿದರು. ಅದನ್ನು ಒಪ್ಪಿದ ಪೊಲೀಸರು, ಏಪ್ರಿಲ್ 2ರಂದು ಪುನಃ ವಿಚಾರಣೆಗೆ ಬರುವಂತೆ ಹೇಳಿ ರಮೇಶ ಅವರನ್ನು ವಾಪಸ್ ಕಳುಹಿಸಿದ್ದಾರೆ.

**ಹಿಂಬಾಗಿಲಿನಿಂದ ಹೊರಟರು:** ವಿಚಾರಣಾ ಕೊಠಡಿಗೆ ಮುಂಬಾಗಿಲಿನಿಂದ ಪ್ರವೇಶಿಸಿದ್ದ ರಮೇಶ, ವಿಚಾರಣೆ ಮುಗಿದ ನಂತರ ಹಿಂಬಾಲಿನಿಂದ ಹೊರಟು ಹೋದರು. ಪ್ರತಿಕ್ರಿಯೆಗಾಗಿ ಕಾದು ನಿಂತಿದ್ದ ಮಾಧ್ಯಮದವರ ಕಣ್ಣು ತಪ್ಪಿಸಲು ಹೀಗೆ ಹೋದರು ಎಂದು ಹೇಳಲಾಗಿದೆ.

**ಪೊಲೀಸರಿಂದಲೇ ತನಿಖೆ:** 'ಯುವತಿ ನೀಡಿದ್ದ ದೂರು ಆಧರಿಸಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣವನ್ನು ಇದುವರೆಗೂ ಎಸ್‌ಐಟಿಗೆ ಹಸ್ತಾಂತರಿಸಿಲ್ಲ.

'ರಮೇಶ ದಾಖಲಿಸಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ. ಯುವತಿ ನೀಡಿದ್ದ ದೂರಿನ ಪ್ರಕರಣವನ್ನು ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಯುವತಿಯಿಂದ ನೇರವಾಗಿ ಹೇಳಿಕೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ' ಎಂದೂ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

## ಒಳ ಉಡುಪು ಹಿಡಿದು ಪ್ರತಿಭಟನೆ; ವಶಕ್ಕೆ

ರಮೇಶ ವಿಚಾರಣೆ ನಡೆಯುತ್ತಿದ್ದ ಸಂದರ್ಭದಲ್ಲೇ ಯುವ ಕಾಂಗ್ರೆಸ್ ಕಾರ್ಯಕರ್ತರು ಆಡುಗೋಡಿಯಲ್ಲಿ ಪ್ರತಿಭಟನೆ ನಡೆಸಿದರು.

ಒಳ ಉಡುಪು ಹಿಡಿದು ಘೋಷಣೆ ಕೂಗಿದ ಕಾರ್ಯಕರ್ತರು, 'ರಮೇಶ ಅವರನ್ನು ಕೂಡಲೇ ಬಂಧಿಸಿ ಜೈಲಿಗಟ್ಟಬೇಕು' ಎಂದು ಆಗ್ರಹಿಸಿದರು.

'ಅಧಿಕಾರ ಹಾಗೂ ಪ್ರಭಾವದ ದರ್ಪದಿಂದ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ಅತ್ಯಾಚಾರ ಎಸಗಿರುವ ರಮೇಶ ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದೆ. ಅಷ್ಟಾದರೂ ಅವರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ. ಪೊಲೀಸರು ಹಾಗೂ ರಾಜ್ಯ ಸರ್ಕಾರವೇ ರಮೇಶ ಪರ ಕೆಲಸ ಮಾಡುತ್ತಿದೆ' ಎಂದೂ ದೂರಿದರು.

ಸ್ಥಳಕ್ಕೆ ಬಂದ ಪೊಲೀಸರು, ಕಾರ್ಯಕರ್ತರನ್ನು ವಶಕ್ಕೆ ಪಡೆದು ಕರೆದೊಯ್ದರು. ಮಧ್ಯಾಹ್ನದ ನಂತರ ಬಿಡುಗಡೆಗೊಳಿಸಿದರು.